**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

| ಸಿ.ಸಿ.ನಂ. 1858/2023 | | | |
|---|---|---|---|
| ಸಾಕ್ಷಿದಾರರ ಹೆಸರು | ಕುಮಾರ | | |
| ಗಂಡಃತಂದೆಃಹೆಸರು | ಗೋವಿಂದಪ್ಪ | ಪಿಡಬ್ಲ್ಯೂ | 1 |
| ವಯಸ್ಸುಃ | 31 ವರ್ಷ | ಸಿಡಬ್ಲ್ಯೂ | 2 |
| ಉದ್ಯೋಗಃ | ಗಾರೆ ಕೆಲಸ | | |
| ವಾಸ ಸ್ಥಳಃ | ಚಿಂತಾಮಣಿ | | |

**ದಿನಾಂಕಃ 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

ಚಾಸಾ-1 ಮತ್ತು ನ್ಯಾಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತಿಲ್ಲ. ಸಾಕ್ಷಿ ದಾಳಿ ಪಂಚನಾಮೆನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 1 ಎಂದು ಅದರಲ್ಲಿರುವ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಿಪಿ 1ಕ್ಕೆ 2 ವರ್ಷದ ಹಿಂದೇ ಸಹಿ ಮಾಡಿರುತ್ತೇನೆ. ರೆಡ್ಡಿ ಹೋಟೆಲ್ ನಲ್ಲಿ ಸಹಿ ಮಾಡಿರುತ್ತೇನೆ. ನಿಪಿ 1ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪೊಲಿಸರಿಗೆ ಹೇಳಿಕೆಯನ್ನು ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ-**

ದಿಃ 16.06.2023 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ–3 ರವರು ಚಿಂತಾಮಣಿ ನಗರದ ಚೇಳೂರು ವೃತ್ತದಲ್ಲಿದಾಗ ಚಾಸಾ–1 ರವರು ಗಸ್ತಿನಲ್ಲಿದ್ದು ಚೇಳೂರು ರಸ್ತೆಯಲ್ಲಿರುವ ರೆಡ್ಡಿ ಮಿಲ್ಟ್ರಿ ಹೋಟೆಲ್ ಮಾಲೀಕರು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮಧ್ಯ ಶೇಖರಣೆ ಮಾಡಿ ಹೋಟೆಲ್ ಬರುವ ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದಾಗಿ ಬಂದ ಖಚಿತ ಮಾಹಿತಿ ಮೇರೆಗೆ ನಮ್ಮನ್ನು ಪಂಚರಾಗಿ ಸಹಕರಿಸಬೇಕೆಂದು ಹೇಳಿದ ಮೇರೆಗೆ ನಾವು ಹೋಗಿ ಚಾಸ–1 ರವರ ಪೊಲೀಸ್ ಜೀಪಿನಲ್ಲಿ ರೆಡ್ಡಿ ಮಿಲ್ಟ್ರಿ ಹೋಟೆಲ್ ಗೆ ಹೋಗುವಷ್ಟರಲ್ಲಿ ನಮ್ಮನ್ನು ನೋಡಿ ಹೋಟೆಲ್ ಮಾಲಿಕರು ಓಡಿ ಹೋಗಲು ಪ್ರಯತ್ತಿಸಿದ್ದು ಪೋಲಿಸರು ಅವರನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ಆತನ ಹೆಸರು ವೆಂಕಟರೆಡ್ಡಿ ಬಿನ್ ಗೋಪಾಲರೆಡ್ಡಿ ಉಳವಾಡಿ ಗ್ರಾಮ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಹೋಟಲ್ ಪರಿಶಿಲಿಸಲಾಗಿ ಹಾಲ್ ನ ದಕ್ಷಿಣ ದಿಕ್ಕಿನ ಮೂಲೆಯಲ್ಲಿ ರಟ್ಟಿನ ಬಾಕ್ಸ್ ಗಳನ್ನು ಇಟ್ಟಿದ್ದು ಅವುಗಳಲ್ಲಿ ಮಧ್ಯದ ಟೆಟ್ರಾ ಪ್ಯಾಕೆಟ್ ಬಾಟಲುಗಳಿದ್ದು ಆರೋಪಿಯನ್ನು ಪೋಲಿಸರು ಈ ಮಧ್ಯವನ್ನು ಶೇಖರಣೆ ಮಾಡಲು ನಿಮ್ಮ ಬಳಿ ಯಾವುದಾದಾರು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಅವರು ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿದು ಎಂದರೆ ಸರಿಯಲ್ಲ. ನಂತರ ಮಧ್ಯವನ್ನು ನಮ್ಮ ಸಮಕ್ಷಮ ಪರಿಶೀಲಿಸಲಾಗಿ 500 ಎಂ. ಎಲ್.ನ 4 ಪವರ್ ಕೂಲ್ ಸ್ಟ್ರಾಂಗ್ ಬೀರ್ ಟಿನ್ ಗಳಿದ್ದು ಇವುಗಳು ಒಟ್ಟು 2 ಲೀ. ಮಧ್ಯವಿದ್ದು ಇದು ಒಟ್ಟು ಬೆಲೆ 340 ರೂ. ಗಳಾಗಿರುತ್ತೆ. 650 ಎಂ. ಎಲ್.ನ 7 ಪವರ್ ಕೂಲ್ ಸ್ಟ್ರಾಂಗ್ ಬೀರ್ ಬಾಟಲ್ ಗಳಿದ್ದು ಇವುಗಳು ಒಟ್ಟು 4 ಲೀ. 550 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 770 ರೂ. ಗಳಾಗಿರುತ್ತೆ. 650 ಎಂ. ಎಲ್.ನ 10 ಕಿಂಗ್ ಫಿಶರ್ ಬೀರ್ ಬಾಟಲ್ ಗಳಿದ್ದು 6 ಲೀ. 550

ಎಂ.ಎಲ್.ನ ಮಧ್ಯವಿದ್ದು ಇದರ ಒಟ್ಟು ಬೆಲೆ 1700 ರೂ. ಗಳಾಗಿರುತ್ತೆ. 650 ಎಂ. ಎಲ್.ನ 7 ಟುಬರ್ಗ್ ಬೀರ್ ಬಾಟಲ್ ಗಳಿದ್ದು ಇವುಗಳು ಒಟ್ಟು 4 ಲೀ. 550 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 1190 ರೂ. ಗಳಾಗಿರುತ್ತೆ. 650 ಎಂ. ಎಲ್.ನ 4 ನಾಕ್ ಔಟ್ ಹೈ ಪಂಚ್ ಬೀರ್ ಬಾಟಲ್ ಗಳಿದ್ದು ಇವುಗಳು ಒಟ್ಟು 2 ಲೀ.600 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 600 ರೂ. ಗಳಾಗಿರುತ್ತೆ. 650 ಎಂ. ಎಲ್.ನ 11 ಫಾಸ್ಟರ್ ಗೊಲ್ಡ್ ಸ್ಟ್ರಾಂಗ್ ಬೀರ್ ಬಾಟಲ್ ಗಳಿದ್ದು ಇವುಗಳು ಒಟ್ಟು 7 ಲೀ.150 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 1650 ರೂ. ಗಳಾಗಿರುತ್ತೆ. 90 ಎಂ. ಎಲ್.ನ 11 ಅಮೃತ್ಸ್ ಸೀಲ್ವರ್ ಕಪ್ ಇಂಡಿಯನ್ ಬ್ರಾಂಡಿ ಸ್ಯಾಟುಟ್ ಗಳಿದ್ದು ಇವುಗಳು ಒಟ್ಟು 990 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 307.78 ರೂ. ಗಳಾಗಿರುತ್ತೆ. 180 ಎಂ. ಎಲ್.ನ 16 ಬ್ಯಾಗ್ ಪೈಪರ್ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳಿದ್ದು ಇವುಗಳು ಒಟ್ಟು 2 ಲೀ.880 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 1698.8 ರೂ. ಗಳಾಗಿರುತ್ತೆ. 90 ಎಂ. ಎಲ್.ನ 24 ಹೈ ವರರ್ಡ್ಸ್ ಚೇಯರ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟು ಗಳಿದ್ದು ಇವುಗಳು ಒಟ್ಟು 2 ಲೀ.160 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 843.12 ರೂ. ಗಳಾಗಿರುತ್ತೆ. 180 ಎಂ. ಎಲ್.ನ 8 ಓಲ್ಡ್ ಟ್ರಾವೆನ್ ವಿಸ್ಕಿ ಟೆಟ್ರಾ ಪ್ಯಾಕೇಟು ಗಳಿದ್ದು ಇವುಗಳು ಒಟ್ಟು 1 ಲೀ.440 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 694 ರೂ. ಗಳಾಗಿರುತ್ತೆ. 180 ಎಂ. ಎಲ್.ನ 8 ರಾಡಿಕೋ 8 ಪಿ.ಎಂ. ಇಂಡಿಯನ್ ವಿಸ್ಕಿ ಟೆಟ್ರಾ ಪ್ಯಾಕೇಟು ಗಳಿದ್ದು ಇವುಗಳು ಒಟ್ಟು 1 ಲೀ.440 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 694 ರೂ. ಗಳಾಗಿರುತ್ತೆ. 90 ಎಂ. ಎಲ್.ನ 32 ಓರಿಜಿನ್ ಚಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕೆಸೇಟು ಗಳಿದ್ದು ಇವುಗಳು ಒಟ್ಟು 2 ಲೀ.880 ಎಂ.ಎಲ್. ಮಧ್ಯವಿದ್ದು ಇದು ಒಟ್ಟು ಬೆಲೆ 1124.16 ರೂ. ಗಳಾಗಿರುತ್ತೆ. 90 ಎಂ. ಎಲ್.ನ 12

ಎಂ.ಸಿ. ಡೊವೆಲ್ಸ್ ಪ್ರಿಮಿಯರ್ ವಿಸ್ಕಿ ಟೆಟ್ರಾ ಪ್ಯಾಕೇಟು ಗಳಿದ್ದು ಇವುಗಳು ಒಟ್ಟು 1 ಲೀ.0.80 ಎಂ.ಎಲ್. ಮದ್ಯವಿದ್ದು ಇದು ಒಟ್ಟು ಬೆಲೆ 1187.44 ರೂ. ಗಳಾಗಿರುತ್ತೆ. 180 ಎಂ. ಎಲ್.ನ 3 ಇಂಪಿರಿಯಲ್ ಬ್ಲು ಸುಪಿರಿಯರ್ ಗ್ರೇನ್ ವಿಸ್ಕಿ ಬಾಟಲ್ ಗಳಿದ್ದು ಇವುಗಳು ಒಟ್ಟು 540 ಎಂ.ಎಲ್. ಮದ್ಯವಿದ್ದು ಇದು ಒಟ್ಟು ಬೆಲೆ 661.21 ರೂ. ಗಳಾಗಿರುತ್ತೆ. 90 ಎಂ. ಎಲ್.ನ 3 ಮಾನ್‌ಯ್ ಸನ್ ಹೌಸ್ ಪ್ರೆಂಚ್ ಬ್ರಾಂಡಿ ಬಾಟಲ್ ಗಳಿದ್ದು ಇವುಗಳು ಒಟ್ಟು 270 ಎಂ.ಎಲ್. ಮದ್ಯವಿದ್ದು ಇದು ಒಟ್ಟು ಬೆಲೆ 387.63 ರೂ. ಗಳಾಗಿರುತ್ತೆ. 90 ಎಂ. ಎಲ್.ನ 6 ಡಿ.ಎಸ್.ಪಿ. ಬ್ಲ್ಯಾಕ್ ವಿಸ್ಕಿ ಬಾಟಲ್ ಗಳಿದ್ದು ಇವುಗಳು ಒಟ್ಟು 540 ಎಂ.ಎಲ್. ಮದ್ಯವಿದ್ದು ಇದು ಒಟ್ಟು ಬೆಲೆ 566.28 ರೂ. ಗಳಾಗಿರುತ್ತೆ. ಮೇಲ್ಕಂಡ ಎಲ್ಲಾ ಮದ್ಯವು ಒಟ್ಟು 41 ಲೀಟರ್ 570 ಎಂ.ಎಲ್. ನಷ್ಟು ಇದ್ದು ಇದರ ಒಟ್ಟು ಬೆಲೆ 14,417 ರೂ.ಗಳು ಆಗಿರುತ್ತದೆ ಎಂದರೆ ಸರಿಯಲ್ಲ. ಪೋಲಿಸರು ಆರೋಪಿಯನ್ನು ಮದ್ಯದ ಬಗ್ಗೆ ವಿಚಾರಿಸಲಾಗಿ ಅವರು ಎಲ್ಲಾ ಮದ್ಯವನ್ನು ಚಿಂತಾಮಣಿ ನಗರದ ಜಲ್ಸಾ ಬಾರ್ ನ ಮಾಲೀಕರಾದ ವೆಂಕಟರೆಡ್ಡಿ ರವರಿಂದ ತೆಗೆದುಕೊಂಡು ಬಂದು ಹೋಟೆಲ್ ಗೆ ಬರುವ ಗ್ರಾಹಕರಿಗೆ ಮಾರಾಟ ಮಾಡಿ ಹಣ ಸಂಪಾದನೆ ಮಾಡಿಕೊಳ್ಳಲು ಇಟ್ಟುಕೊಂಡಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಆ ಮದ್ಯದ ಪೈಕಿ ತಲಾ ಒಂದೊಂದು ಬಾಟಲ್ / ಟೇಟ್ರಾ ಪ್ಯಾಕೇಟನ್ನು ಎಫ್. ಎಸ್. ಎಲ್ ಗೆ ಕಳಹಿಸುವ ಸಲುವಾಗಿ ಪ್ರತ್ಯೇಕವಾಗಿ ತೆಗೆದು R.N. ಎಂಬ ಅಕ್ಷರದಿಂದ ಸೀಲ್ ಮಾಡಿ ಅದರ ಮೇಲೆ ಪಂಚರಾದ ನನ್ನ ಮತ್ತು ಚಾಸಾ-3 ರವರೇ ಸಹಿಯಿಂದ ಕ್ಯೂ.ಆರ್. ಕೋಡ್ ಅನ್ನು ಅಂಟಿಸಿರುತ್ತಾರೆ ಎಂದರೆ ಸರಿಯಿಲ್ಲ. ನಂತರ ಆರೋಪಿಯನ್ನು ವಶಕ್ಕೆ ಪಡೆದು ಮಾಲು ಪಂಚನಾಮೆಯನ್ನು ಮಾಡಿ ಮಾಲನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ವಿಚಾರ ಕೇಳಲಾಗಿ

ಆರೋಪಿಯವರು ಚಿಂತಾಮಣಿ ವಿವಿದ ಭಾಗಗಳಲ್ಲಿ ಸುಮಾರು ದಿನಗಳಿಂದ ಖರೀದಿ ಮಾಡಿ ತನ್ನ ಹೋಟೆಲ್ ಬರುವ ಗ್ರಾಹಕರಿಗೆ ಮಾರಾಟ ಮಾಡುವ ಸಲುವಾಗಿ ಆಗಾಗ ಮದ್ಯವನ್ನು ತೆಗೆದುಕೊಂಡು ಅಕ್ರಮವಾಗಿ ಮದ್ಯವನ್ನು ಶೇಖರಣೆ ಮಾಡಿ ಮಾರಾಟ ಮಾಡುತ್ತಿದ್ದರು ಎಂದು ತಿಳಿಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಸಂಜೇ 6 ರಿಂದ 7 ಗಂಟೆಯವರಗೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ದಿಃ 17.06.2023 ರಂದು ಪೋಲಿಪಿಸರಿಗೆ ಹೇಳಿಕೆಯನ್ನು ನೀಡಿರುತ್ತೆನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದಿರುವುದರಿಂದ ಸಾಕ್ಷಿಯು ನೀಡಿದ ಹೇಳಿಕೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ನಿಪಿ 1 ಮತ್ತು 2 ರಲ್ಲಿನ ಸಂಗತಿಗಳು ಗೊತ್ತಿದ್ದರು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ.ಜಿ.ಎಸ್. ಆರೋಪಿ ಪರ ವಕೀಲರಿಂದಃ- ಇಲ್ಲ.</u>**

**<u>ಮರು ವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**Sd/-**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.